ಸಾಕ್ಷಿಯನ್ನು ದಿಃ24.03.2023 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು ಪ್ರತಿವಾದಿಗಳ ಪರ ಶ್ರೀ ಎಸ್ ಜೆ ವಕೀಲರಿಂದಃ**

ಪ್ರತಿವಾದಿ ರವೀಂದ್ರನಾಥ್ ಮತ್ತು ಮಂಜೇಶ್ ವಾದಿಯರಿಗೆ ಸಂಬಂಧಿಕರಾಗಬೇಕು ಆದರೆ ಅವರ ತಂದೆಯವರು ಬೇರೆ ಬೇರೆ . ರವೀಂದ್ರನಾಥ್ ಮತ್ತು ಮಂಜೇಶ್ ಇಬ್ಬರು ಕ್ರಯಕ್ಕೆ ಪಡೆದ ವಿಷಯ ವಾದಿಯರಿಗೆ ಮತ್ತು ಪ್ರತಿವಾದಿಯರಿಗೆ ಗೊತ್ತಿತ್ತು ಅನ್ನುವುದು ಸರಿಯಲ್ಲ. ಈ ಇಬ್ಬರು ಪ್ರತಿವಾದಿಯರು ದಾವಾ ಸ್ವತ್ತನ್ನು ಖರೀದಿಸಿದ ವಿಷಯ ವಾದಿ ಮತ್ತು ಇತರೆ ಪ್ರತಿವಾದಿಯರಿಗೆ ಗೊತ್ತಿದ್ದರೂ ಸಹ ಗೊತ್ತಿರಲಿಲ್ಲವೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವೆ ಹಾಕುವ ಸವಯಕ್ಕೆ ವಾದಿ ಲೋಕಮ್ಮ ಒಟ್ಟು ಕುಟುಂಬದ ಸದಸ್ಯರಾಗಿರಲಿಲ್ಲ ಎಂದರೆ ಸರಿಯಲ್ಲ. ದಾವೆಯ 1 ಮತ್ತು 2 ನೇ ಐಟಂ ಆಸ್ತಿಗಳು ಈಗಾಗಲೇ ಸಲ್ಲಿಸುವಾಗ ಒಟ್ಟು ಕುಟುಂಬದ ಆಸ್ತಿಗಳು ಆಗಿರಲ್ಲಿಲಲ ಎಂದರೆ ಸರಿಯಲ್ಲ. 19 ಮತ್ತು 20 ನೇ ಪ್ರತಿವಾದಿಯರಿಗೆ ನಷ್ಟ ಉಂಟು ಮಾಡುವ ಉದ್ದೇಶದಿಂದ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿ ಲೋಕಮ್ಮ ಇಬ್ಬರು ಪ್ರತಿವಾದಿಗೆ ನಷ್ಟ ಉಂಟು ಮಾಡಲು ಈ ಸುಳ್ಳು ದಾವೆ ಸಲ್ಲಿಸಿದ್ದಾಳೆ ಎಂದರೆ ಸರಿಯಲ್ಲ. 19 ಮತ್ತು 20 ನೇ ಪ್ರತಿವಾದಿಯರು ದಾವೆಯ 1 ಮತ್ತು 2 ನೇ ಆಸ್ತಿಗಳನ್ನು ಕ್ರಯಕ್ಕೆ ಪಡೆಯುವ ಮುಂಚೆ ಅವುಗಳ ಬಗ್ಗೆ ಎಲ್ಲಾ ದಾಖಲಾತಿಗಳನ್ನು ಪರಿಶೀಲಿಸಿ ಮಾಹಿತಿಯನ್ನು ಪಡೆದು ಕ್ರಯಕ್ಕೆ ಪಡೆದಿದ್ದಾರೆ ಎಂದರೆ ಸರಿಯಲ್ಲ. ನಾನು ವಾದಿ ಪರವಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 19 ಮತ್ತು 20 ನೇ

ಪ್ರತಿವಾದಿಯರಿಗೆ ಮಾತ್ರ ದಾವಾ ಐಟಂ ನಂ. 1 ಮತ್ತು 2 ರಲ್ಲಿ ಹಕ್ಕು ಮತ್ತು ಹಿತಾಸಕ್ತಿ ಇರುತ್ತದೆ ಅನ್ನುವುದು ಸರಿಯಲ್ಲ.

**15 ಮತ್ತು 16 ನೇ ಪ್ರತಿವಾದಿಯರನ್ನು ಕೂಗಿಸಲಾಯಿತು. ಈ ದಿನ ನ್ಯಾಯಾಲಯಕ್ಕೆ ಗೈರುಹಾಜರಿರುತ್ತಾರೆ. ಆದ್ದರಿಂದ 15 ಮತ್ತು 16 ನೇ ಪ್ರತಿವಾದಿಯರ ಪರವಾಗಿ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.**

ನನ್ನ ಉಕ್ತ ಲೇಖನದಂತೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ ಹೇ ಕೇ ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ ಹಿರಿಯೂರು.